# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

## ಮೊದಲ ಹಂತದ ಕೌನ್ಸಿಲಿಂಗ್‌ನ ವೇಳಾಪಟ್ಟಿ

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಜರುಗುವ 2020-21 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮೊದಲನೇ ಹಂತದ ಕೌನ್ಸಿಲಿಂಗ ಪ್ರವೇಶ ಪ್ರಕ್ರಿಯೆಗಳ ವೇಳಾಪಟ್ಟಿ (ವಾಣಿಜ್ಯಶಾಸ್ತ್ರ ಹೊರತುಪಡಿಸಿ)**

| Sl. No. | Counselling Date | Time | Subjects | | | |
|---|---|---|---|---|---|---|
| | | | Counter-01 | Counter-02 | Counter-03 | Counter-04 |
| 1 | **02-11-2020 Monday** | I – 09.00 am 01.30 pm | English Rank: 1 to 80 | Mathematics Rank: 1 to 80 | Physics Rank: 1 to 80 | Chemistry Rank: 1 to 80 |
| | | II – 02.30 pm 06.00 pm | English Rank: 81 to 160 | Mathematics Rank: 81 to 160 | Physics Rank: 81 to 160 | Chemistry Rank: 81 to 160 |
| 2 | **03-11-2020 Tuesday** | I – 09.00 am 01.30 pm | English Rank: 161 Onwards | Mathematics Rank: 161 to 240 | Physics Rank: 161 to 240 | Chemistry Rank: 161 to 240 |
| | | II – 02.30 pm 06.00 pm | M.P.Ed Rank: 1 to All | Mathematics Rank: 241 Onwards | Physics Rank: 241 Onwards | Chemistry Rank: 241 to 320 |
| 3 | **04-11-2020 Wednesday** | I – 09.00 am 01.30 pm | Political Science Rank: 1 to 80 | Zoology Rank: 1 to 80 | Botany Rank: 1 to 80 | Chemistry Rank: 321 Onwards |
| | | II – 02.30 pm 06.00 pm | Political Science Rank: 81 to 160 | Zoology Rank: 81 Onwards | Botany Rank: 81 Onwards | Sociology Rank: 1 to All |
| 4 | **05-11-2020 Thursday** | I – 09.00 am 01.30 pm | Political Science Rank: 161 Onwards | Kannada Rank: 1 to 80 | History Rank: 1 to 80 | M.S.W Rank: 1 to 80 |
| | | II – 02.30 pm 06.00 pm | Marathi Rank: 1 to All | Kannada Rank: 81 Onwards | History Rank: 81 Onwards | M.S.W Rank: 81 Onwards |
| 5 | **06-11-2020 Friday** | I – 09.00 am 01.30 pm | Economics Rank: 1 to 80 | Journalism & Mass Communication Rank: 1 to All | Criminology & Criminal Justice Rank: 1 to All | Computer Science Rank: 1 to All |
| | | II – 02.30 pm 06.00 pm | Economics Rank: 81 Onwards | M.Ed Rank: 1 to All | M.L.I.Sc Rank: 1 to All | Geography Rank: 1 to All |

**ವಿಶೇಷ ಸೂಚನೆ:**

1. ವಾಣಿಜ್ಯಶಾಸ್ತ್ರ ವಿಷಯದ ಪ್ರವೇಶಾತಿಯ ಕೌನ್ಸಲಿಂಗ್ ಪ್ರಕ್ರಿಯೆಯನ್ನು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ನಡೆಸಲಾಗುವುದು.
2. ಕೌನ್ಸಿಲಿಂಗ್‌ಗೆ ಹಾಜರಾಗುವ ದಿನಾಂಕದಂದು ಶೈಕ್ಷಣಿಕ ಹಾಗೂ ಇನ್ನಿತರ ದಾಖಲೆಗಳ ಮೂಲ ಪ್ರತಿಗಳನ್ನು ವಿದ್ಯಾರ್ಥಿಗಳು ಖುದ್ದಾಗಿ ತೆಗೆದುಕೊಂಡು ಬರಬೇಕು.
3. ಕೌನ್ಸಿಲಿಂಗ್ ದಿನಾಂಕದಂದು ಸೀಟು ಹಂಚಿಕೆ ದಿನವೇ ಪೂರ್ತಿ ಪ್ರವೇಶ ಶುಲ್ಕ ಭರಿಸಬೇಕಾಗಿರುವುದರಿಂದ ಕಡ್ಡಾಯವಾಗಿ ಶುಲ್ಕ ಪಟ್ಟಿಯಲ್ಲಿರುವ (**Fee Structure**) ಶುಲ್ಕದೊಂದಿಗೆ ಹಾಜರಾಗುವುದು.

ಮುಂದುವರೆದಿದೆ. . . . . . .

# <u>ಅಭ್ಯರ್ಥಿಗಳಿಗೆ ಸೂಚನೆಗಳು:</u>

1. ಸ್ನಾತಕೋತ್ತರ ಅಧ್ಯಯನಗಳ ಆಯಾ ವಿಭಾಗಗಳಲ್ಲಿ ವಿದ್ಯಾರ್ಥಿಗಳ ನೊಂದಣಿ ಪ್ರಕ್ರಿಯೆ ಬೆಳಿಗ್ಗೆ 9.00 ಘಂಟೆಯಿಂದ ಪ್ರಾರಂಭವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ವಿಶ್ವವಿದ್ಯಾಲಯಕ್ಕೆ ಆಗಮಿಸಬೇಕು.
2. ಆಯಾ ವಿಭಾಗಗಳ **ಸೂಚನಾ ಫಲಕದಲ್ಲಿ ಹಾಗೂ ವೆಬ್‌ಸೈಟ್‌ನಲ್ಲಿ ಅಳವಡಿಸಿದ ಮೆರಿಟ್ ಪಟ್ಟಿಯನ್ನು (Merit List)** ನೋಡುವುದು ಹಾಗೂ ತಮ್ಮ ಕ್ರಮ ಸಂಖ್ಯೆಯನ್ನು ಗಮನದಲ್ಲಿ ಇಟ್ಟುಕೊಳ್ಳುವುದು, ಕೌನ್ಸಿಲಿಂಗ ಸಂದರ್ಭದಲ್ಲಿ ತಮ್ಮ ಮೂಲ ದಾಖಲೆಗಳನ್ನು ಆಯಾ ವಿಭಾಗಗಳಲ್ಲಿ ಪರಿಶೀಲನೆಗೆ ಒಳಪಡಿಸುವುದು.
3. ಅನ್ವಯಿಸುವಂತಹ ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರವನ್ನು ಒದಗಿಸುವುದು.
4. ಕರ್ನಾಟಕೇತರ ವಿಶ್ವವಿದ್ಯಾಲಯದ ಅಭ್ಯರ್ಥಿಗಳು ಹಾಗೂ ಕರ್ನಾಟಕ ಮೂಲದ ಇತರೇ ವಿಶ್ವವಿದ್ಯಾಲಯದ ಅಭ್ಯರ್ಥಿಗಳು ಕಡ್ಡಾಯವಾಗಿ ರಾಣಿಚನ್ನಮ್ಮ ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ಅರ್ಹತಾ ಪ್ರಮಾಣ ಪತ್ರ ಪಡೆದುಕೊಳ್ಳಬೇಕು.
5. ಆಯ್ಕೆ ಮಾಡಿಕೊಂಡ ಪ್ರವೇಶ ಸ್ಥಳವನ್ನು ತಿಳಿದುಕೊಂಡು ಪ್ರವೇಶ ಸಂದರ್ಭದಲ್ಲಿಯೇ ಪೂರ್ಣ ಶುಲ್ಕವನ್ನು ಬ್ಯಾಂಕಿನ ಚಲನ್ ಮುಖಾಂತರ ಭರಣಾ ಮಾಡಿ ಅದರ ಒಂದು ಪ್ರತಿಯನ್ನು ಆಯಾ ವಿಭಾಗದ ಮುಖ್ಯಸ್ಥರಿಗೆ ನೀಡಬೇಕು.
6. ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯದವರು ವಿದ್ಯಾರ್ಥಿಗಳಿಂದ **ವಿಶ್ವವಿದ್ಯಾಲಯದ ಶುಲ್ಕ ಬಿಟ್ಟು ಹೆಚ್ಚಿನ ಶುಲ್ಕಗಳನ್ನು** ಆಕರಣೆ ಮಾಡಬಾರದು.
7. ಹೈದರಾಬಾದ-ಕರ್ನಾಟಕ ಭಾಗದ ವಿದ್ಯಾರ್ಥಿಗಳು ಮೀಸಲಾತಿಗಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ **ಅನುಚ್ಛೇದ 371 (ಜೆ) ಗೆ** ಅನ್ವಯಿಸುವಂತೆ ಅರ್ಹತಾ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಒದಗಿಸಬೇಕು.
8. ರಾಣಿಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ **ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರವೇಶಾತಿ ನೀಡಲಾಗುವುದು**. ಈ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು (ಆತ್ಮಹತ್ಯೆ ಮಾಡಿಕೊಂಡ ಬಗ್ಗೆ) ಪಡೆದು, ಪ್ರವೇಶಾತಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.
9. ಹೊರನಾಡು/ಗಡಿನಾಡು ಭಾಗದ ವಿದ್ಯಾರ್ಥಿಗಳು ಸಕ್ಷಮ ಪ್ರಾಧಿಕಾರದ ಪ್ರಮಾಣ ಪತ್ರ ಲಗತ್ತಿಸುವುದು.
10. ಪ್ರವೇಶ ಪಡೆದ ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿಕೊಂಡ ವಿಶ್ವವಿದ್ಯಾಲಯ/ಮಹಾವಿದ್ಯಾಲಯಕ್ಕೆ **ನಿಗದಿಪಡಿಸಿದ ದಿನಾಂಕದೊಳಗೆ** ಹಾಜರಾಗಿ ವರದಿಯನ್ನು ಒಪ್ಪಿಸುವುದು. ತಪ್ಪಿದಲ್ಲಿ ತಮ್ಮ ಮುಂದಿನ ಆಗುಹೋಗುಗಳಿಗೆ ತಾವೇ ಜವಾಬ್ದಾರರು.
11. ಪ್ರವೇಶ ಪಡೆದ ವಿದ್ಯಾರ್ಥಿಗಳು ಒಂದು ವೇಳೆ ತರಗತಿಗಳಿಗೆ ಗೈರು ಹಾಜರಾದಲ್ಲಿ ಅಂಥ ವಿದ್ಯಾರ್ಥಿಗಳ ವರದಿಯನ್ನು ಆಯಾ ವಿಭಾಗದ ಮುಖ್ಯಸ್ಥರು ವಿಶ್ವವಿದ್ಯಾಲಯದ ಸಂಯೋಜಕರು, ಪಿ.ಜಿ. ಕೌನ್ಸಿಲಿಂಗ್ ಇವರಿಗೆ ಬಾಕಿ ಉಳಿದ ಸೀಟುಗಳ ವರದಿಯನ್ನು ಒಪ್ಪಿಸುವುದು.
12. ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು ಮುಖ್ಯ ಕೇಂದ್ರ ಬಸ್ ನಿಲ್ದಾಣದಿಂದ 18 ಕಿ.ಮಿ ದೂರದಲ್ಲಿದ್ದು, ಬೆಳಗಾವಿ ನಗರದಿಂದ ಸಿಟಿ ಬಸ್ ಹಾಗೂ ಖಾಸಗಿ ವಾಹನಗಳ ಸೌಲಭ್ಯವು ಸಹ ಇರುತ್ತದೆ.
13. ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಹಾಜರಿರಬೇಕು. ಒಂದು ವೇಳೆ ನಿಗದಿತ ಸಮಯಕ್ಕೆ ಬಾರದ ವಿದ್ಯಾರ್ಥಿಗಳ ಪ್ರವೇಶಾತಿಗೆ ಪರಿಗಣಿಸಲಾಗುವುದಿಲ್ಲ.
14. ಪ್ರವೇಶಾತಿಗಾಗಿ ಬರುವ ವಿದ್ಯಾರ್ಥಿಗಳು ಸೀಟು ಹಂಚಿಕೆಯ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಚಲನ ಮುಖಾಂತರ ಹಣವನ್ನು ಸಂದಾಯ ಮಾಡಬೇಕು. ಒಂದು ವೇಳೆ ಹಣವನ್ನು ಸಂದಾಯ ಮಾಡಲು ವಿಫಲವಾದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಪ್ರವೇಶಾತಿಗೆ ಪರಿಗಣಿಸಲಾಗುವುದಿಲ್ಲ.

ಸಹಿ/-

**ಕುಲಸಚಿವರು**